# ಸಾಹಿತ್ಯ ಲೋಕವ ವಿಸ್ತರಿಸಿದ ಬಂಡಾಯಗಾರ



**ಒಡನಾಟ**



» ಎನ್.ಎಸ್.ಶ್ರೀಧರ ಮೂರ್ತಿ

ನನಗೆ ರಾಮಚಂದ್ರ ದೇವ ಅವರ ಪರಿಚಯವಾಗಿದ್ದು ಗಿರೀಶ್ ಕಾಸರವಳ್ಳಿಯವರ 'ಬಣ್ಣದ ವೇಷ' ಚಿತ್ರದ ಸಂದರ್ಭದಲ್ಲಿ. ಈ ಚಿತ್ರದ ಚಿತ್ರಕಥೆ-ಸಂಭಾಷಣೆ ಅವರದ್ದು, ನಾನೂ ಈ ಚಿತ್ರದ ತಂಡದಲ್ಲಿದ್ದಿದ್ದರಿಂದ ನಿಕಟವಾದರು. ಅವರ ಚಿಂತನಾ ಕ್ರಮ ಗಮನ ಸೆಳೆಯಿತು. ಅವರ 'ಮೂಗೇಲ ಮತ್ತು ಇತರ ಕತೆಗಳು' ಸಂಕಲನ ಇದೇ ಸಂದರ್ಭದಲ್ಲಿ ಪ್ರಕಟಾಗಿತ್ತು. ಇದರ ಕುರಿತು ನಾನು ಬರೆದ ವಿಮರ್ಶೆ ಅವರಿಗೆ ಇಷ್ಟವಾಯಿತು. ನಾನು ಬೆಂಗಳೂರಿಗೆ ಬಂದ ಮೇಲೆ ಅವರ ಭೇಟಿ ಬೆಳೆಯುತ್ತಾ ಹೋಯಿತು. ನನ್ನ ಮೊದಲ ವಿಮರ್ಶಾ ಸಂಕಲನ ಅಭಿಮುಖಕ್ಕೆ ಅವರು ಬೆನ್ನುಡಿ ಬರೆದರೆ 'ಶೋಧ' ಕಾದಂಬರಿಗೆ ಮುನ್ನುಡಿಯನ್ನು ಬರೆದರು. ಅದಕ್ಕಿಂತ ಮುಖ್ಯವಾಗಿ ತಮ್ಮ ವಿಶಿಷ್ಟವಾದ ಚಿಂತನೆಗಳಿಂದ ನಮ್ಮನ್ನು ಬೆಳೆಸಿದರು. ಎಷ್ಟೋ ವರ್ಷಗಳ ಕಾಲ ಅವರ ಮೊದಲ ಬರಹಗಳ ಓದುಗನಾಗಿದ್ದ ಅದೃಷ್ಟ ನನ್ನದು.

1948ರ ಮಾರ್ಚ್ 22ರಂದು ಕೋಟೆ ಮುಂಡಗಾರಿನಲ್ಲಿ ಜನಿಸಿದ ರಾಮಚಂದ್ರ ದೇವ ಕಲ್ಮಡ್ಕದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದರು, ಪುತ್ತೂರಿನಲ್ಲಿ ಪಿ.ಯು.ಸಿಯನ್ನು ಮುಗಿಸಿದ ನಂತರ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪದವಿಯನ್ನು ಪಡೆದು ಮಾನಸ ಗಂಗೋತ್ರಿಯಲ್ಲಿ ಇಂಗ್ಲೀಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಶೇಕ್ಸ್ ಪಿಯರ್ ಸಾಹಿತ್ಯದ ಕನ್ನಡ ಅನುವಾದಗಳ ಕುರಿತ 'ಶೇಕ್ಸ್ ಪಿಯರ್ ಎರಡು ಸಂಸ್ಕೃತಿಗಳಲ್ಲಿ' ಎಂಬ ವಿಷಯಕ್ಕೆ ಪಿ.ಎಚ್.ಡಿ ಪದವಿಯನ್ನು ಪಡೆದರು. ಸೂಕ್ಷ್ಮ ಒಳನೋಟಗಳುಳ್ಳ ಈ ಮಹಾ ಪ್ರಬಂಧ ಅನುವಾದಗಳಲ್ಲಿ ಸಾಂಸ್ಕೃತಿಕ ಬಿಕ್ಕಟ್ಟನ್ನು ಚರ್ಚಿಸಿದ ಮಹತ್ವದ ಪ್ರಯತ್ನವಾಗಿತ್ತು.

ಕೆಲ ಕಾಲ ಉಪನ್ಯಾಸಕರಾಗಿದ್ದ ದೇವ, 'ಪ್ರಜಾವಾಣಿ' ಪತ್ರಿಕೆಯಲ್ಲಿ ಕೆಲಕಾಲ ಪತ್ರಕರ್ತರೂ ಕೂಡ ಆಗಿದ್ದರು. ಈ ಸಂದರ್ಭದಲ್ಲಿ ಪ್ರಿಂಟರ್ಸ್ ಪ್ರಕಾಶನದ ಹೊಣೆ ಹೊತ್ತು ಹಲವು ಮುಖ್ಯ ಕೃತಿಗಳು ಹೊರ ಬರಲು ಕಾರಣವಾದರು. ಮುಂದೆ ನವದೆಹಲಿಯ ಅಮೆರಿಕನ್ ಎಂಬಸಿಯ ಯುನೈಟೆಡ್ ಸ್ಟೇಟ್ಸ್ ಆಫ್ ಲೈಬ್ರರಿ ಕಾಂಗ್ರೇಸಿನಲ್ಲಿ ಗ್ರಂಥಪಾಲಕರಾಗಿ ಮಹತ್ವದ ಸೇವೆಯನ್ನು ಸಲ್ಲಿಸಿದರು. ಕನ್ನಡ ಸಾಹಿತ್ಯಕ್ಕೆ ಜಾಗತಿಕ ಸ್ಥಾನಮಾನ ದೊರಕಿಸಲು ಈ ಸಂದರ್ಭದಲ್ಲಿ ಅವರು ಮಾಡಿದ ಪ್ರಯತ್ನಗಳು ಮಹತ್ವಪೂರ್ಣವಾದವು. ನಂತರ ಕೆಲಕಾಲ ಕುವೆಂಪು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಅವರು ನಂತರ ಸ್ವತಂತ್ರ ಜೀವನವನ್ನು ಆಯ್ಕೆ ಮಾಡಿ ಕೊಂಡರು. ಬೆಂಗಳೂರಿನ ಶ್ರೀನಗರದಲ್ಲಿ ಕೆಲ ಕಾಲ ಪುಸ್ತಕದಂಗಡಿ ಕಂ ಆರ್ಟ್ ಗ್ಯಾಲರಿ ನಡೆಸಿದ ನಂತರ ತಮ್ಮ ವಾಸ್ತವ್ಯವನ್ನು ಸಹಕಾರ ನಗರಕ್ಕೆ ವರ್ಗಾಯಿಸಿ ಕೊಂಡರು.

ಇಲ್ಲೊಂದು ಪ್ರಯೋಗಶೀಲ ಮನೆಯನ್ನೂ ಕಟ್ಟಿದರು. ನಂತರ ಮೈಸೂರಿನಲ್ಲಿ ಕೆಲವು ದಿನಗಳು ಇದ್ದ ಅವರು ಕೊನೆಯ ದಿನಗಳಲ್ಲಿ ಸ್ವಂತ ಊರಾದ ಕಲ್ಮಡ್ಕದಲ್ಲಿ ಕೃಷಿಕರಾದರು. ಇಲ್ಲಿಯೂ ಅವರ ಸಾಹಿತ್ಯಕ ಚಟುವಟಿಕೆಗಳು ನಿರಂತರವಾಗಿ ಮುಂದುವರೆದಿದ್ದವು. ಬೋಧಿಟ್ರಸ್ಟ್ ಸ್ಥಾಪಿಸಿ ಗ್ರಾಮೀಣ ಭಾಗದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸಲು ಪ್ರಯತ್ನಿಸಿದರು.

ಏಳನೆಯ ತರಗತಿಯಲ್ಲಿದ್ದಾಗಲೇ ಬೇಡವಾದ 'ತಾಯಿ' ಎನ್ನುವ ನಾಟಕವನ್ನು ಬರೆದಿದ್ದ ದೇವ ಹೈಸ್ಕೂಲಿನಲ್ಲಿದ್ದಾಗಲೇ ನಾ.ಮೊಗಸಾಲೆ ಮತ್ತು ಸುಬ್ರಾಯ ಚೊಕ್ಕಾಡಿಯವರ ಜೊತೆಗೂಡಿ ವಸಂತ ಸಾಹಿತ್ಯ ಎನ್ನುವ ಪ್ರಕಾಶನ ಸಂಸ್ಥೆಯನ್ನು ರೂಪಿಸಿದ್ದರು. ಹೈಸ್ಕೂಲಿನಲ್ಲಿ ಇದ್ದಾಗಲೇ ಆಗಿನ ಪ್ರಮುಖ ಪತ್ರಿಕೆ 'ಗೋಕುಲ'ದಲ್ಲಿ ಅವರ ಅನೇಕ ಪ್ರಮುಖ ಬರಹಗಳು ಪ್ರಕಟವಾದವು. ಪದವಿಯಲ್ಲಿ ಓದುತ್ತಿದ್ದಾಗ ಪ್ರಜಾವಾಣಿಯ ವಿದ್ಯಾರ್ಥಿ ವಿಭಾಗಕ್ಕೆ ಇವರು ಕಳುಹಿಸಿದ ಕಥೆಗೆ ಸಾರ್ವಜನಿಕ ವಿಭಾಗದಲ್ಲಿ ಬಹುಮಾನ ಬಂದಿತು. 1972ರಲ್ಲಿ ಡಿ.ಎಸ್.ಶ್ರೀಕಂಠ ಮೂರ್ತಿಗಳ ಜೊತೆ ಸೇರಿ 'ನೇತಿ' ಎನ್ನುವ ಸಾಹಿತ್ಯಿಕ ಪತ್ರಿಕೆಯನ್ನು ದೇವ ನಡೆಸಿದ್ದರು. 1994ರಿಂದ 2000ದವರೆಗೆ ಉದಯವಾಣಿ ಪತ್ರಿಕೆಗೆ ದೇವ 'ಮಾತುಕತೆ' ಎನ್ನುವ ವಿಶಿಷ್ಟವಾದ ಅಂಕಣವನ್ನು ಬರೆದರು.

**ಯುಧಿಷ್ಠಿರ ಸಂಸ್ಕೃತಿ ಮತ್ತು ದುರ್ಯೋದನ ಸಂಸ್ಕೃತಿ ಎಂಬ ಪರಿಕಲ್ಪನೆಗಳನ್ನು ಕನ್ನಡಕ್ಕೆ ಪರಿಚಯಿಸಿದ ರಾಮಚಂದ್ರ ದೇವ, ಇತಿಹಾಸದ ಪಲ್ಲಟ, ನಾಗರಿಕತೆ ಆಕ್ರಮಣ, ಸಂಸ್ಕೃತಿಯ ನೆಲೆ ಇವುಗಳ ಕುರಿತು ಬೇರೆ ಬೇರೆ ಮಾಧ್ಯಮಗಳ ಮೂಲಕ ಚಿಂತಿಸುತ್ತಾ ಬಂದರು.**

## ನವ್ಯದ ಕಾವು ಉಳಿಸಿಕೊಂಡವರು

ಸರಿ ಸುಮಾರು ಅರ್ಧ ಶತಮಾನಗಳ ಕಾಲ ನಿರಂತರವಾಗಿ ಬರವಣಿಗೆಯನ್ನು ಮಾಡಿದ ರಾಮಚಂದ್ರ ದೇವ ಸದಾ ಪ್ರಯೋಗಶೀಲರಾಗಿದ್ದರು. ನವ್ಯ ಸಾಹಿತ್ಯದ ಉತ್ತುಂಗ ಕಾಲದಲ್ಲಿ ತಮ್ಮ ಬರವಣಿಗೆಯನ್ನು ಆರಂಭಿಸಿದ ಅವರು ಅದರ ಕಾವಿಳಿದ ಮೇಲೆ ಕೂಡ ಅದರ ಅಂತ:ಸತ್ವ ಉಳಿಸಿ ಕೊಂಡ ಕೆಲವೇ ಬರಹಗಾರರಲ್ಲಿ ಪ್ರಮುಖರು. ಅಂತರಂಗ ನಿರೀಕ್ಷೆಯ ಜೊತೆಗೆ ಬಹಿರಂಗ ಪಲ್ಲಟಗಳನ್ನು ಗುರುತಿಸುತ್ತಾ ಬಂದ ದೇವ ಅವರದು ಸಾಂಸ್ಕೃತಿಕ ನೆಲೆಗಟ್ಟಿನ ಕಾಳಜಿ. ಯುಧಿಷ್ಠಿರ ಸಂಸ್ಕೃತಿ ಮತ್ತು ದುರ್ಯೋದನ ಸಂಸ್ಕೃತಿ ಎಂಬ ಪರಿಕಲ್ಪನೆಗಳನ್ನು ಕನ್ನಡಕ್ಕೆ ಪರಿಚಯಿಸಿದ ದೇವ, ಇತಿಹಾಸದ ಪಲ್ಲಟ, ನಾಗರಿಕತೆ ಆಕ್ರಮಣ, ಸಂಸ್ಕೃತಿಯ ನೆಲೆ ಇವುಗಳ ಕುರಿತು ಬೇರೆ ಬೇರೆ ಮಾಧ್ಯಮಗಳ ಮೂಲಕ ಚಿಂತಿಸುತ್ತಾ ಬಂದರು.

1994ರಲ್ಲಿ ಮಂಡ್ಯದಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಕಥನ ಇಂದಿನ ಬಿಕ್ಕಟ್ಟುಗಳ ಕುರಿತ ಪ್ರಬಂಧ ಮತ್ತೆ ಹಿಂದಕ್ಕೆ ಬಹಳ ಮಹತ್ವದ ಆಯಾಮಗಳನ್ನು ಹೊಂದಿತ್ತು. ಫ್ಯಾಂಟಸಿಯನ್ನು ಭಾರತೀಯ ನೆಲೆಗಳಿಂದ ಪಡೆಯಲು ಪ್ರಯತ್ನಿಸಿದ ದೇವ 'ವಡ್ಡಾರಾಧನೆ'ಯಿಂದ ಕಥನಕ್ರಮವನ್ನು ರೂಪಿಸಲು ಪ್ರಯತ್ನಿಸಿದರು. ಅವರ 'ಮೂಗೇಲ' ಯಾವ ದೃಷ್ಟಿಯಿಂದ ನೋಡಿದರೂ ಕನ್ನಡದ ಬಹಳ ಮುಖ್ಯವಾದ ಕಥೆಯಾಗಿದೆ. ಅರ್ಬುದ, ಪುಣ್ಯಕೋಟಿ, ಬೇತಾಳದ ಕತೆ, ರಿಸಾರ್ಟ್ ಮೊದಲಾವು ಅವರ ಪ್ರಮುಖ ಕಥೆಗಳು.

ರಾಮಚಂದ್ರ ದೇವ ಅತ್ಯುತ್ತಮ ಅನುವಾದಕರೂ ಕೂಡ ಹೌದು. ಶೇಕ್ಸ್‌ಪಿಯರ್‌ನ ಎಲ್ಲಾ ನಾಟಕಗಳನ್ನೂ ಕನ್ನಡಕ್ಕೆ ಅನುವಾದಿಸುವ ಮಹತ್ವಾಕಾಂಕ್ಷೆ ಅವರಿಗಿತ್ತು. ಅವರ ಯೋಜನೆ ಈಡೇರದೆ ಹೋದರೂ ಪ್ರಮುಖ ನಾಟಕಗಳನ್ನು ಅನುವಾದಿಸಿದರು. ಇದರಲ್ಲಿ ಮ್ಯಾಕ್ ಬೆತ್ ಮತ್ತು ಹ್ಯಾಮ್ಲೆಟ್ ಮಹತ್ವದ ಅನುವಾದಗಳು ಎಂದು ಹೆಸರು ಮಾಡಿರುವುದಲ್ಲದೆ ಅನೇಕ ಪ್ರಯೋಗಗಳನ್ನೂ ಕಂಡಿದೆ. ಹಲವು ಸ್ವತಂತ್ರ ನಾಟಕಗಳನ್ನೂ ಬರೆದಿರುವ ದೇವ ಅವರ 'ರಥ ಮಸುಲ' ನವವಸಾಹತುಶಾಹಿ ಪರಿಣಾಮಗಳನ್ನು ಬಹಳ ಹಿಂದೆಯೇ ಗುರುತಿಸಿತ್ತು.

## ಹುಲಿಯ ಕಥೆ

ಹುಲಿಯ ಕಥೆ, ದಂಗೆ, ಸುದರ್ಶನ ಜರಾಸಂಧ ಮೊದಲಾದವು ಅವರ ಮಹತ್ವದ ನಾಟಕಗಳು. ಕಾವ್ಯವನ್ನು ತಮ್ಮ ಪ್ರಧಾನ ಅಭಿವ್ಯಕ್ತಿಯ ಮಾಧ್ಯಮ ಎಂದು ಕರೆದು ಕೊಳ್ಳುತ್ತಿದ್ದ ದೇವ ಅವರ ಕವಿತೆಗಳು ಭಾಷೆ ಮತ್ತು ಸಂವೇದನೆಗಳಲ್ಲಿ ಹೊಸ ರೂಪವನ್ನು ಬಳಸಿದ್ದವು. ಎಲಿಯಟ್ ಕಾವ್ಯದಂತೆ ಮೂರ್ತದಿಂದ ಅಮೂರ್ತಕ್ಕೇರುವ ಕಲ್ಪಕತೆ ಅವರ ಶಕ್ತಿ. ಅವರ ಕಾವ್ಯ ಪ್ರಪಂಚದಲ್ಲಿ ದೇವಾನು ದೇವತೆಗಳು, ಐತಿಹಾಸಿಕ, ಪುರಾಣದ ವ್ಯಕ್ತಿಗಳು ಸಮಕಾಲೀನರಾಗಿ ಹೊಸ ಸಾಧ್ಯತೆಯನ್ನು ಧ್ವನಿಸುತ್ತಿದ್ದರು. ಅವರ ಸಮಗ್ರ ಕಾವ್ಯ ಮಾತನಾಡುವ ಮರದ ಬಿಡುಗಡೆಯ ಸಂದರ್ಭದಲ್ಲಿ ಇದರ ಕುರಿತು ಮಾತನಾಡುವ ಅವಕಾಶವನ್ನು ಅವರು ನನಗೆ ಕಲ್ಪಿಸಿದ್ದರು. ಸಮಗ್ರತೆಯೇ ದೇವ ಅವರ ಕಾವ್ಯಕ್ಕಿರುವ ಶಕ್ತಿ, ಹೊರ ನಿಂತು ನೋಡುವ ನಿರದ್ವಿಗ್ನತೆಯೇ ಅವರ ತಂತ್ರಗಾರಿಕೆ.

ದೇವ ಸದಾ ಬಂಡಾಯಗಾರರು, ವ್ಯವಸ್ಥೆಯ ವಿರುದ್ಧ ತಮ್ಮ ಜೀವನದುದ್ದಕ್ಕೂ ಹೋರಾಟವನ್ನು ಮಾಡಿ ಕೊಂಡೇ ಬಂದರು. ಇದರಿಂದ ತಮಗೆ ದೊರಕಬಹುದಾಗಿದ್ದ ಅನೇಕ ಅವಕಾಶಗಳನ್ನು ಕಳೆದುಕೊಂಡರು. ನಾನು 'ಮಲ್ಲಿಗೆ' ಮಾಸ ಪತ್ರಿಕೆಯಲ್ಲಿರುವಾಗ ಅವರ ಜೀವನ ಚರಿತ್ರೆಯನ್ನು ಪ್ರಕಟಿಸಲು ನನಗೆ ನೀಡಿದರು. ಅದರ ಕೆಲವು ಘಟನೆಗಳು ಎಷ್ಟು ಸ್ಫೋಟಕವಾಗಿದ್ದವಂದರೆ ನಮ್ಮ ಮಿತಿಯಲ್ಲಿ ಅದನ್ನು ಪ್ರಕಟಿಸುವುದು ಸಾಧ್ಯವೇ ಇರಲಿಲ್ಲ. ಈ ಕುರಿತು ಕೆಲವು ಕಾಲ ದೇವ ಅವರಿಗೆ ನನ್ನ ಮೇಲೆ ಕೋಪವಿತ್ತು. ಆದರೆ ಅವರು ಯಾವುದನ್ನೂ ಮುಂದುವರೆಸುವವರಲ್ಲ. ನಾನು 'ವಿಜಯವಾಣಿ' ಯಲ್ಲಿದ್ದಾಗ, ವಿಶೇಷಾಂಕಕ್ಕೆ ಕಥೆ ಕೇಳಿದೆ. ಅವರು ಆಯಿತು ಎಂದು ಬಹಳ ಹೊತ್ತು ಮಾತನಾಡಿದರು. ಆದರೆ ಅದೇ ಅವರ ಜೊತೆಗಿನ ಕೊನೆಯ ಸಂಭಾಷಣೆಯಾಯಿತು. ಮುಂದೆ ಆಸ್ಪತ್ರೆ ಸೇರಿ 2013ರ ಸೆಪ್ಟಂಬರ್ 11ರಂದು ನಮ್ಮನ್ನು ಅಗಲಿದರು.

# ಮಾಯಾನಗರಿಯಲ್ಲಿ ಮಥಾಡಿಗಳು

**ಮುಂಬಾ ಪುರಿ**



» ಕಲಾ ಭಾಗ್ವತ್

ಮುಂಬೈ ಮಹಾನಗರದ ಒಟ್ಟಾರೆ ಸಂಸ್ಕೃತಿಯನ್ನು ರೂಪಿಸುವಲ್ಲಿ ಇಲ್ಲಿನ ಕಾರ್ಮಿಕರ ಶ್ರಮಿಕರ ಪಾತ್ರವು ಬಹಳ ದೊಡ್ಡದು. ಆಂಜನೇಯನು ಸಂಜೀವಿನಿ ಪರ್ವತವನ್ನು ಎತ್ತಿರುವ ಕಥೆಯನ್ನು ಕೇಳಿ ಅಬ್ಬಬ್ಬಾ! ಅವನ ಶಕ್ತಿಯೇ ಎಂದು ಆಶ್ಚರ್ಯ ಪಡುವವರು ದಿನಪೂರ್ತಿ ಭಾರವ ಹೊತ್ತು ನಗರದ ಹೊರೆಯನ್ನು ಕಡಿಮೆ ಮಾಡಿ ಹೊಸ ಜೀವ ಕೊಡುವವರ ಶ್ರಮವನ್ನೂ ಅಷ್ಟೇ ಆಶ್ಚರ್ಯದಿಂದ ಕಾಣಬೇಕಾಗಿದೆ. ಸಾಮಾನ್ಯರೆನಿಸಿಕೊಂಡೇ ಅಸಾಮಾನ್ಯರಾಗಿರುವ ಇವರೆಲ್ಲ ಈಗ ಯಂತ್ರಗಳೊಂದಿಗೆ ಪೈಪೋಟಿಗೆ ಇಳಿಯಬೇಕಾಗಿದೆ. ಇಂತಹ ಶ್ರಮಿಕರಲ್ಲಿ ಮುಂಬೈ ಮಹಾನಗರದಲ್ಲಿ ಮುಂಡಾಸು ಸುತ್ತಿಕೊಂಡು ಹೊರೆ ಹೊರುವ ಮಥಾಡಿಗಳು ಮುಖ್ಯರಾಗುತ್ತಾರೆ.

ನೌಕಾ ನೆಲೆ, ಪ್ರಮುಖ ಗೋದಾಮುಗಳು, ನಗರ ಪಾಲಿಕೆಯ ಬಟವಾಡೆ ಕೇಂದ್ರಗಳು, ಮುಖ್ಯ ವ್ಯಾಪಾರಿ ಸ್ಥಳಗಳು ಇತ್ಯಾದಿ ಕಡೆಗಳಲ್ಲಿ ಇವರು ಗುಂಪು ಗುಂಪಾಗಿ ಬಂದು ಭಾರದ ಚೀಲಗಳನ್ನು ಜಾರಿಸಿಕೊಂಡು ಬೀಗಿ ಬಾಗಿ ಓಡುವಾಗ ಇಡೀ ನಗರಕ್ಕೆ ಒಂದು ಬಗೆಯ ಶಕ್ತಿಯ ಸಂಚಲನವಾಗುವುದು ಸತ್ಯ. ದೂರದೂರುಗಳಿಂದ ಬರುವ ರೈಲು ಗಾಡಿಗಳು ಮುಂಬಾಪುರದ ಮುಖ್ಯ ರೈಲ್ವೆ ನಿಲ್ದಾಣಗಳೊಳಗೆ ಪ್ರವೇಶ ಮಾಡುತ್ತಿದ್ದಂತೇ ರೈಲಿನ ಬಾಗಿಲ ಬಳಿಗೇ ಓಡೋಡಿ ಬಂದು ಮಾತನಾಡಿಸಿ ನಮ್ಮನ್ನು ಸ್ವಾಗತಿಸುವವರು ಕೆಂಪಂಗಿ ದಳದ ಮಥಾಡಿಗಳು. ಬೇಡವೆಂದರೂ ಬಿಡದೆ ಪ್ರಯಾಣಿಕರ ಸಾಮಾನಿನ ಚೀಲವನ್ನು ಹೊತ್ತು ಅವರವರ ಗಾಡಿ ಹತ್ತಿಸಿ ಬರುವ ಇವರು ಆ ಕ್ಷಣದಲ್ಲಿ ನಮ್ಮ ಬಂಧುಗಳೇ ಆಗಿ ಬಿಡುತ್ತಾರೆ. ಬದುಕಿನ ಹೋರಾಟದ ಸಂಘಟನೆ ಇವರದ್ದು. ಸರಕಾರಿ ಕಾಯ್ದೆಯ ವ್ಯಾಪ್ತಿಗೆ ಒಳಪಡುವ ಮಥಾಡಿ ಒಕ್ಕೂಟಗಳು ಈ ದೈಹಿಕ ಶ್ರಮ ಜೀವಿಗಳಿಗೆ ಉದ್ಯೋಗ, ಆರೋಗ್ಯ, ವಸತಿ ಹಾಗೂ ಸುರಕ್ಷತೆಯ ದೃಷ್ಟಿಯಿಂದ ಸಹಾಯ ಮಾಡುತ್ತವೆ. ಮಥಾಡಿ ಎನ್ನುವ ಹೆಸರು ಮಾಥಾ (ತಲೆ) ಎನ್ನುವ ಮೂಲ ಪದದಿಂದ ಹುಟ್ಟಿಕೊಂಡಿದೆ.

ಭಾರತದ ಪ್ರಮುಖ ಉತ್ಪಾದನ ಕೇಂದ್ರವಾದ ಮುಂಬಾಪುರಿಯು ಗಣನೀಯವಾದ ಗ್ರಾಹಕ ಮಾರುಕಟ್ಟೆಯನ್ನೂ ಹೊಂದಿದೆ. ಇಲ್ಲಿ ಸಾಮಾನುಗಳ ಆಯಾತ ನಿರ್ಯಾತಗಳು ಸದಾ ನಡೆದಿರುತ್ತವೆ. ಅವಗಡಗಳಾಗದಂತೆ ಗೋದಾಮಿನಲ್ಲಿರುವ ಸಾಮಾನುಗಳನ್ನು ತಲೆಯ ಮೇಲೆ, ಬೆನ್ನ ಮೇಲೆ ಹೊತ್ತುಕೊಂಡು ವಾಹನಗಳಿಗೆ ಲೋಡ್ ಮಾಡುವುದು, ವಾಹನಗಳಿಂದ ಇಳಿಸಿಕೊಂಡು ಗೋದಾಮಿನಲ್ಲಿ ಜಾಗವು ವ್ಯರ್ಥವಾಗದಂತೆ ಪಟ್ಟಾಗಿ ಪೇರಿಸಿಡುವುದು ಇನ್ನೂ ಮುಂತಾದ ಕೆಲಸಗಳಲ್ಲಿ ಮಥಾಡಿಗಳ ಕೌಶಲ್ಯ, ಪರಿಶ್ರಮವು ಎದ್ದು ಕಾಣುತ್ತದೆ. ಮಹಾರಾಷ್ಟ್ರದ ಹಾಗೂ ದೇಶದ ಹಲವು ಬರಪೀಡಿತ ಪ್ರದೇಶಗಳಿಂದ ಈ ಮಹಾನಗರಕ್ಕೆ ಬರುವ ಇವರಿಗೆ ಹೊರೆ ಹೊರುವ ಕೆಲಸವು ಅತೀ ಪರಿಚಿತವಾದದ್ದು. ಎಲ್ಲೆಂದರಲ್ಲಿ ಲೀಲಾಜಾಲವಾಗಿ ಕಬ್ಬಿಣ, ಸಿಮೆಂಟು, ಕಾರ್ಖಾನೆಗಳ ಸಿದ್ಧ ಸರಕುಗಳು, ಪರ ಊರಿನಿಂದ ಬರುವ ತರಕಾರಿ ಹಣ್ಣುಗ್ಳ ಸಹಸ್ರಾರು ಮೂಟೆಗಳನ್ನು ಸಾಗಿಸುವ ಮಥಾಡಿಗಳು ಆ ಕಾರ್ಯವನ್ನು ಅತ್ಯಂತ ಸುಗಮವಾಗಿ ನಿರ್ವಹಿಸುತ್ತಿದ್ದಾರೆ. ಕಾರ್ಮಿಕ ಕಾಯ್ದೆಯಡಿಯಲ್ಲಿ ಖಾಸಗಿ ಕಾರ್ಖಾನೆಗಳಲ್ಲಿ ಈ ಕೆಲಸಕ್ಕೆ ಕೆಲವು ಪ್ರಮಾಣದಲ್ಲಿ ಮಥಾಡಿಗಳನ್ನು ಕಡ್ಡಾಯವಾಗಿ ನೇಮಿಸಿಕೊಳ್ಳಬೇಕೆಂಬ ಸರ್ಕಾರಿ ನಿಯಮವೂ ಇದೆ. ಮಥಾಡಿ ಕಾಮಗಾರ ಒಕ್ಕೂಟಕ್ಕೆ ಹೋಗಿ ಹೆಸರಿನ ನೋಂದಣಿ ಮಾಡಿಕೊಂಡು ಗುರುತಿನ ಚೀಟಿ ಪಡೆದರೆಂದರೆ ಅವರ ಕೆಲಸ ಇನ್ನೂ ಸರಳವಾಗುವುದು.

ಆಧುನಿಕತೆಯ ಸಂದರ್ಭದಲ್ಲಿ ಕಾರ್ಖಾನೆಗಳ ವೆಚ್ಚವನ್ನು ನಿಯಂತ್ರಿಸಲು ಹೆಚ್ಚಿನ ಕೆಲಸಗಳು ಯಂತ್ರ ಚಾಲಿತವಾಗಿವೆ. ದುಡಿದು ತಿನ್ನುವ ಶ್ರಮಜೀವಿಗಳ ದೃಷ್ಟಿಯಿಂದ ಇದು ಪ್ರತಿಕೂಲ ಬೆಳವಣಿಗೆಯಾಗಿದೆ. ವಾಣಿಜ್ಯ ನಗರಿಯ ಮಥಾಡಿಗಳು ತಮ್ಮ ಹಕ್ಕನ್ನು ಕಾಯ್ದುಕೊಳ್ಳಲು ಆಗಾಗ ಮುಷ್ಕರ ಹೂಡಬೇಕಾದ ಸ್ಥಿತಿ ಎದುರಾಗುವುದು ಇಲ್ಲಿ ಸಾಮಾನ್ಯವಾಗಿದೆ. ಯಾವುದಕ್ಕೂ ಬಗ್ಗದ ಇವರು ತಮಗೇನು ಬೇಕಾದರೂ ಸಂಘಟಿತರಾಗಿ ಹೋರಾಟವನ್ನು ಮಾಡಿಯೇ ಪಡೆಯುತ್ತಾರೆ. ದುಡಿಯುವ ಹಕ್ಕು ಎಲ್ಲರಿಗೂ ಇದೆ ಎಂಬುದನ್ನು ಅವರು ದೃಢಪಡಿಸಿದ್ದಾರೆ. ಈ ಕಾರಣದಿಂದಾಗಿ ದೇಶದ ಉಳಿದೆಡೆಗಳಿಗಿಂತ ಮುಂಬೈಯಲ್ಲಿ ಕಾರ್ಖಾನೆಗಳನ್ನು ನಡೆಸಲು ತಗಲುವ ಖರ್ಚು ವೆಚ್ಚಗಳು ಹೆಚ್ಚು ಎಂಬ ನಿರ್ಧಾರಕ್ಕೆ ಬಂದು ಎಷ್ಟೋ ಕಾರ್ಖಾನೆಗಳನ್ನು ಇಲ್ಲಿಂದ ಬೇರೆಡೆಗೆ ವರ್ಗಾಯಿಸಲಾಗುತ್ತಿದೆ. ಕಾರ್ಮಿಕರ ಪಾಲಿಗೆ ಇದೊಂದು ಕಹಿ ಸತ್ಯ. ಕಾಮ್ ಹಿ ಭಗವಾನ್ ಎಂಬ ಶ್ರಮ ಸಂಸ್ಕೃತಿಯ ಧ್ಯೇಯ ವಾಕ್ಯವು ಇವರ ಉಸಿರಿನಲ್ಲಿ ಬೆರೆತು ಹೋಗಿದೆ. ದುಡಿದು ಸರಿಯಾದ ನೆಲೆಯನ್ನೂ ಅವರು ಕಂಡುಕೊಂಡಿದ್ದಾರೆ. ಅಂತೆಯೇ ಮುಂದಿನ ಪೀಳಿಗೆಗೆ ಗಳಿಕೆಯ ಬೇರೆ ದಾರಿಯನ್ನು ತೋರುವ ವ್ಯವಸ್ಥೆಗೂ ವಾಲಿಕೊಂಡಿದ್ದಾರೆ.



**ಗೋದಾಮಿನಲ್ಲಿರುವ ಸಾಮಾನುಗಳನ್ನು ತಲೆಯ ಮೇಲೆ, ಬೆನ್ನ ಮೇಲೆ ಹೊತ್ತು ವಾಹನಗಳಿಗೆ ಲೋಡ್ ಮಾಡುವುದು, ವಾಹನಗಳಿಂದ ಇಳಿಸಿಕೊಂಡು ಗೋದಾಮಿನಲ್ಲಿ ಪೇರಿಸಿಡುವುದು ಮುಂತಾದ ಕೆಲಸಗಳಲ್ಲಿ ಮಥಾಡಿಗಳ ಕೌಶಲ್ಯ, ಪರಿಶ್ರಮವು ಎದ್ದು ಕಾಣುತ್ತದೆ.**

ಆರ್ಥಿಕವಾಗಿ ಹಲವು ವರ್ಗಗಳಿಗೆ ಸ್ವರ್ಗವಾಗಿರುವ ಮುಂಬೈ ಮಹಾನಗರಕ್ಕೆ ಬಂದವರು ಇಲ್ಲಿನ ಸಿಮೆಂಟಿನ ಶಿಖರಗಳಂತೇ ಅವುಗಳ ತಳಗಳನ್ನೂ ಒಳಗಣ್ಣಿಂದ ಕಂಡಾಗ ಅರಿವಿಗೆ ಬರುವವರು ಈ ಮಥಾಡಿಗಳು. ಮುಂಬಾಪುರಿಯಲ್ಲಿ ವಿಳಾಸಗಳು ಹೆಚ್ಚಾಗುತ್ತಿರುವುದರ ಜೊತೆಯಲ್ಲಿ ವಿಕಾಸವೂ ಆಗುತ್ತಿರುವುದಕ್ಕೆ ಇವರ ಶ್ರಮವೂ ಮುಖ್ಯ ಕಾರಣವಾಗಿದೆ ಎನ್ನುವುದನ್ನು ಮರೆಯುವಂತಿಲ್ಲ. ಮಥಾಡಿ ಕಾರ್ಮಿಕರು ಹೆಚ್ಚಿನವರು ಇಲ್ಲಿ ಸ್ವಂತ ಮನೆ ಮಾಡಿಕೊಂಡು ಭದ್ರವಾಗಿ ನೆಲೆಯೂರಿದ್ದಾರೆ. ಅವರ ಮುಂದಿನ ಪೀಳಿಗೆಯವರು ಶಿಕ್ಷಣವನ್ನು ಪಡೆದು ಒಳ್ಳೊಳ್ಳೆಯ ಕೆಲಸಗಳಲ್ಲಿ ಭರ್ತಿಯಾಗಿದ್ದಾರೆ. ಅವರಿಗೀಗ ಅದು ಅನಿವಾರ್ಯವೂ ಆಗಿದೆ.

ಏನಾನುಮಂ ಮಾಡು ಕೈಗೆ ದೊರೆತುಜ್ಜುಗವ ?
ನಾನೇನು ಹುಲುಕಡ್ಡಿಯೆಂಬ ನುಡಿ ಬೇಡ ??


ಎಂಬ ಕವಿವಾಣಿಯಂತೆ ಕೈಗೆ ದೊರೆತ ಉದ್ಯೋಗವನ್ನು ಸ್ವಯಂ ನಿಷ್ಠೆಯಿಂದ ಮಾಡುತ್ತ ಹೊತ್ತ ನೆಲವನ್ನು ಶ್ರೀಮಂತಗೊಳಿಸುವಲ್ಲಿ ಇವರ ಯೋಗದಾನ ಹಿರಿದಾದುದು. ಇವರೊಂದು ದಿವಸ ಮುಷ್ಕರ ಹೂಡಿದರೆ ಮಾರುಕಟ್ಟೆಯಲ್ಲಿ ಸಾಲಾಗಿ ನಿಂತಿರುವ ಲಾರಿಗಳಲ್ಲಿ ತರಕಾರಿ ಹಣ್ಣುಗಳು ಕೊಳೆತು ನಾರುತ್ತವೆ. ಅದನ್ನು ಬೆಳೆದ ಕೃಷಿಕರಿಗೆ, ವ್ಯಾಪಾರಿಗಳಿಗೆ, ಬಳಕೆದಾರರಿಗೆ ಎಲ್ಲರಿಗೂ ಇದರಿಂದ ಕುಂದು. ದಿನ ದಿನವೂ ಬೆನ್ನ ಬಾಗಿಸಿ ಬೆವರ ಮಣಿ ಹಾರವ ತೊಟ್ಟು ದುಡಿಯುವ ಮಥಾಡಿಗಳಂತಹ ಶ್ರಮ ಜೀವಿಗಳು ಮುಂಬೈ ಎಂಬ ವಿಶ್ವ ವ್ಯಾಪಾರಿ ರಂಗದಲ್ಲಿ ಮುಖ್ಯ ಪಾತ್ರಧಾರಿಗಳು.

ಮನದ, ಜಗದ ಭಾರವನಿಳಿಸುವ ಮಥಾಡಿಗಳ ಹಣೆಯ ಮೇಲೆ ಹರಿಯುವ ಒಂದೊಂದು ಬೆವರ ಹನಿ ಮುತ್ತಾಯ್ತುದೋ.. ಎಂಬುದನ್ನು ಅರಿತಿರುವ ಮುಂಬಾಪುರಿಯಲ್ಲಿ ಕಾರ್ಮಿಕರ ದಿನವೇ ಮಹಾರಾಷ್ಟ್ರ ದಿನವೂ. ಜೈ ಮಥಾಡಿ.

# ಸೋದಿಕೆ

» ಭಾಗೀರಥಿ ಹೆಗಡೆ

**ಸುಲಲಿತ ಪ್ರಬಂಧ**



ಯಂತಾಂದ್ರೂ, ದೊಡಪಣ್ಣ, ಒಂಚೂರು ಸೋದಿಕೆ ನೋಡದೇ ಸೈಯ್ಯೊ, ಸೊಡ್ಲೆ ಎಮ್ಮೆ ಕೆಚ್ಚಲಿಗೆ ಕೈ ಹಚ್ಚಲೇ ಕೊಡ್ತಿಲ್ಲೆ' ಪ್ರತಿ ಚೌತಿ ದಿನ ಪ್ರಸಾದದ ಕಾಯ್ಕಡಿ ಕೊಟ್ಟು ಹೋಗಲು ಬರುವ ದೊಡ್ಡಪ್ಪಣ್ಣನ ಕಾಲು ಕಂಡ ಕೂಡಲೇ ಯಂಕತ್ತೆ ಸಾಮಾನ್ಯವಾಗಿ ಹೇಳುವ ಮಾತು. 'ಹೌದ? ಹಂಗಾರೆ ತಗಂಬಾ ಅಕ್ಷತ ಮಣೆಯ, ಹಾಂಗೇ ಕುಡ್ತೆ ಚಾನೂ ಮಾಡ್ಬಿಡು' ಅವನಿಗೆ ಚಾ ಕುಡಿಯುವ ತಲುಬು. ಯಂಕತ್ತೆಗೆ ಎಮ್ಮೆ ಹಾಲು ಕೊಟ್ಟರೆ ಸಾಕೆಂಬ ಚಿಂತೆ. ಯಾಕೇಂದ್ರೆ ಚಾ ಮಾಡಲು ಹಾಲು ಮೊದಲು ಬೇಕಲ್ಲ. ಅಂತೂ ಅಕ್ಷತ ಮಣೆ ತಂದು ಕೊಟ್ಟು ಅತ್ತೆ ಒಲೆ ಹಚ್ಚಲು ಒಳಗೆ ಹೋದರೆ ದೊಡ್ಡಪ್ಪಣ್ಣ ಓಡಿಸುತ್ತಿರುವ ದೆವ್ವವನ್ನು ಕಾಣುವ ಆಸೆ ನಮಗೆ ಕಿಳ್ಳೆಕ್ಯಾತರಿಗೆ. ಆಚೆ ಮನೆ ಯಂಕು, ಈಚೆ ಮನೆ ಪಾರು, ಮೇಲಿನ ಮನೆ ಗೋವಿಂದ, ಕೆಳಗಿನ ಮನೆ ನರಸಿಂಹ ಜೊತೆಗೆ ನಾನು ನನ್ನ ತಮ್ಮ, ಎಲ್ಲರೂ ಅವನ ಸುತ್ತಮುತ್ತ ನಿಂತು ಎರಡೂ ಕಣ್ಣು ತಿಕ್ಕಿ ತಿಕ್ಕಿ ನೋಡುತ್ತಲೇ ಇರಬೇಕು. ಓಡುತ್ತಿರುವ ದೆವ್ವ ನಮ್ಮ ಕಣ್ಣಿಗೆ ಬೀಳದೆ ಮಾಯವಾಗಿಬಿಡಬಾರದಲ್ಲ! ಇನ್ನು ದೊಡ್ಡಪ್ಪಣ್ಣನ ಸೋದಿಕೆಯ ಆರ್ಭಟಕ್ಕೆ ಚಿಲ್ರೆ ಪಲ್ರೆ ದೆವ್ವ ಪಿಶಾಚಿ ಹಾಂಗಿರ್ಲಿ, ಸಾಕ್ಷಾತ್ ಯಮಧರ್ಮರಾಯನೇ ಬಂದರೂ ಹೌಹಾರಿ ತನ್ನ ಪಾಶವನ್ನಲ್ಲೇ ಒಗೆದು ಓಡಿಹೋಗಬೇಕು!! ಎಡಗೈಯಿಂದ ಅಕ್ಷತ ಕಾಳು(ಇಡಿಯಕ್ಕಿ ಕಾಳು) ಆಚೀಚೆ ಸರಿಸುತ್ತ, ಬಲಗೈಯನ್ನು ಎಡಗಿವಿಯ ವರೆಗೆ ತಂದು ತಂದು ''ಹಾ ಜಿಜಿ ಜಿಜಿ ಜಿಜಿ ಹಕ್-ಹಾ ಜಿಜಿ ಜಿಜಿ ಜಿಜಿ ಹಕ್'' ಎಂದು ಒದರುತ್ತಲೇ ತೆರಗಣ್ಣಿಂದ ಆಗಾಗ ನಮ್ಮನ್ನೂ ನೋಡುತ್ತ, ಮಧ್ಯದಲ್ಲೇ ''ದದ್ದಾನ ದಾನ ದದ್ದ ದಾನೊ, ನನ್ನಾನ ನಾನ ನನ್ನ ನಾನೊ''ಎಂದು ಇನ್ನೊಂದು ಹಾಡನ್ನೂ ಹೇಳುತ್ತ, ಕೊನೇಗೆ ''ಹಶ್ ಹುಶ್ ಹಶ್ ಹುಶ್ ಹಶ್ ಹುಶ್'' ಹೂಂಕರಿಸಿದನೆಂದರೆ ದೆವ್ವ ಬಿಟ್ಟಿತೆಂದೇ ಅರ್ಥ.

ಆ ಹೊತ್ತಿಗೆ ಸರಿಯಾಗಿ ಬಂದು ನಿಂತ ಯಂಕತ್ತೆಯನ್ನು ನೋಡುತ್ತ ಮಾತಾಡುವ ಅವನ ಥಿಟ್ಟು ಯಾವ ಮಹಾ ಮಾಂತ್ರಿಕನಿಗೂ ಕಡಿಮೆಯಲ್ಲ. ''ಯಂಕಿ, ಶೀಂಗೆ ಮಟ್ಟಿ ರಾವು ಗಂಟುಬಿದ್ದಿತ್ತು ನೋಡು, ಸಮಾ ಹೆದ್ರಿಸಿ ಓಡಿಸಿಬಿಟ್ಟೆ. ಇನ್ನ್ಯಾವತ್ತಾದ್ರೂ ಅದು ಈ ಬದಿಗೆ ಮಕ ಹಾಕಿರೆ ಕೇಳು, ಇಕಾ, ಈ ಭಸ್ಮ ಹಿಂಡಿಯಲ್ಲಿ ಕಲಸಿ ಎಮ್ಮಿಗೆ ಕೊಡು, ಅದು ಹ್ಯಾಂಗ್ ನಿಲ್ತಿಲ್ಲೆ ನೋಡನ.'' ಎಂದು ಆಜ್ಞಾಪಿಸಿ ಭಾರೀ ಸುಸ್ತಾದವನಂತೆ ಗೋಡೆಗೊರಗುತ್ತಿದ್ದ. ಆದರೆ ಚೂರೆ ಚೂರು ಹೆಚ್ಚು ಕಡಿಮೆಯಾದರೂ ಎಮ್ಮೆ ಒದ್ದು ಹಾರಿಸುವದು ನಡೆದೇ ಇರುತ್ತಿತ್ತು. ಸರಿ, ಆದರೆ ಅವನ ಮಂತ್ರದ ಮಜಕೂರು ಎಂತದು? ಅದರರ್ಥವೇನು? ಎಂಬುದು ನಮ್ಮನ್ನು ಯಾವಾಗಲೂ ಕಾಡುವ ಪ್ರಶ್ನೆ. ಅದನ್ನೇ ಅವನಿಗೆ ಹೇಳಿದರೆ ''ಅದೆಲ್ಲ ತಗಂಡು ನಿಂಗ ಎಂತಾ ಮಾಡ್ತ್ರಿ? ಹೋಗಿ, ಹೋಗಿ ಕಾಕು ಪೋರಗಳ್ರಾ, ಸುಮ್ಮಂಗೆ ನಿಂಗ ನಿಂಗಳ ಪುಸ್ತಕ ತಗಳಿ'' ಎಂದು ಜಬರಿಸಿಬಿಡುತ್ತಿದ್ದ. ಹಾಗಾಗಿ ಇಂದಿಗೂ ಅದೊಂದು ಚಿದಂಬರ ರಹಸ್ಯವೇ ಆಗಿದೆ.

ಇಲ್ಲಿ ಸೋದಿಕೆಯಾದರೆ ಅಲ್ಲಿ ಆ ಸುಟ್ಟ ಎಮ್ಮೆಗೊಡ್ಡು ಹಾಲು ಕರೆದು ಮುಗಿವ ವರೆಗೂ ಕಾಲೆತ್ತದೆ ಸೋಜ ಹಿಂಡಿ ಮುಕ್ಕುತ್ತ, ಅದು ಮುಗಿದಾಗ ಸುಮ್ಮನೆ ಮೆಲುಕಾಡಿಸುತ್ತ ನಿಂತಿರುತ್ತಿತ್ತು ಎನ್ನುವದಂತೂ ನಾವೆಲ್ಲ ಕಣ್ಣಾರೆ ಕಂಡ ಸತ್ಯ! ದೊಡ್ಡಪ್ಪಣ್ಣನ ನಸೀಬ! ಯಾಕೇಂದ್ರೆ, ಈ ಎಮ್ಮೆಗಳ ಉಪಟಳವೆಂದರೆ ಒಂದೆ ಎರಡೆ? ಹಿಂಡಿಯ ರುಚಿ ಬೇರೆಯಾದರೆ, ಹುಲ್ಲು ಸ್ವಲ್ಪ ಮುಗ್ಗು ಬಂದಿದ್ದರೆ, ತನ್ನ ಕರು ಅಲ್ಲೆಲ್ಲೂ ಕಾಣದಿದ್ದರೆ, ಅಷ್ಟೇ ಅಲ್ಲ, ಹಾಲು ಕರೆವಾಗ ಮತ್ಯಾರಾದರೂ ಮಾತಾಡಿದರೂ ಸಾಕು, ಛಟಾರನೆ ಒದ್ದು ಹಾರಿಸಿ, ಯಜಮಾಂತಿಯನ್ನು ಉರುಳಿಸಿ, ಬೇಕಿದ್ದರೆ ಅವಳ ಮೈ ಮೇಲೇ ತಿರುಗಿ ಅಸಹಕಾರ ಚಳುವಳಿ ಹೂಡದೇ ಬಿಡುವದಿಲ್ಲ. ಇನ್ನು ಒಬ್ಬರದೇ ಕೈ ಮೆಚ್ಚಲಾದರಂತೂ ಇನ್ನೂ ಘೋರ! ದಿನಾ ಎರಡೂ ಹೊತ್ತು ಕೊಟ್ಟಿಗೆ ಚಾಕ್ರಿಯ ಹಿರೇತನ ಹೊತ್ತ ಅತ್ತೆಯ ಬದಲಾಗಿ ಸೊಸೆ ಬಂದರೆ ಎಮ್ಮಿಗೂ ಅಸಲಗ್ಗೆ! ಅವಳು ಕೆಚ್ಚಲಿಗೆ ಕೈ ಹಾಕುವ ಮೊದಲೇ ಅವಳತ್ತ ದುರುಗುಟ್ಟಿ, ಸೀರೆಯನ್ನು ಮೂಸಿ ಮೂಸಿ ನೋಡಿ, ತಕ್ಷಣವೇ ಸಟಕ್ಕನೆ ತಿರುಗಿ ನಿಂತುಬಿಟ್ಟಿತೆಂದರೆ ಅವಳಪ್ಪ ಬಂದರೂ ಹಾಲು ಕರೆಯಲು ಸಾಧ್ಯವಿಲ್ಲ!

ಒಮ್ಮೆ ಮಗರಾಯ ಅಬ್ಬೆಯ ಸೀರೆ ಸುತ್ತಿಕೊಂಡು ಬಂದರೆ ಮೊದಲು ತೆಪ್ಪಗಿದ್ದ ಎಮ್ಮೆ ಮೊಲೆ ಮುಟ್ಟಿದ ಕೂಡಲೇ ಸರಕ್ಕನೆ ಮೈ ಮೇಲೇ ತಿರುಗಿ ಆಚೆ ನಿಂತು ಬಿಟ್ಟದ್ದೇ ಸಿದ್ದ! ಅಕಾಸ್ಮಾತ್ ಒದೆಯದೇ ತೆಪ್ಪಗೆ ನಿಂತಿದ್ದರೂ ಸೊರ ಬಿಡದೆ ಕಲ್ಲು ಕಂಬವಾಗಿಬಿಟ್ಟರೆ ಈ ನರ ಮನುಷ್ಯರು ಎಂಥಾ ಜಪಯಜ್ಞ ಮಾಡಿದರೂ ಹನಿ ಹಾಲು ಹಿಂಡಲಿಕ್ಕೆ ಸಾಧ್ಯವಿಲ್ಲ. ಈಗೇನೊ ಸೊರ ಬಿಡಿಸಲು ಪಶುಪತಿ ಡಾಕ್ಟರು ಇಂಜೆಕ್ಷನ್ನು ಕೊಡುತ್ತಾರೆ, ಆದರೆ ಆವಾಗ ಇಂಜೆಕ್ಷನ್ ಹಾಗಿರಲಿ, ಪಶುಪತಿಯಾದರೂ ಎಲ್ಲಿದ್ದರು? ಎಮ್ಮೆ ದನ ಕಟ್ಟಿದ ಸಕಲೆಂಟು ಜನಕ್ಕೂ ದೊಡ್ಡಪ್ಪಣ್ಣನ ಸೋದಿಕೆಯೇ ಗತಿ!

**ಈ ದೆವ್ವ ಭೂತ ದೃಷ್ಟಿಗಳೆಲ್ಲ ಇಂದಿನ ಮನುಷ್ಯರ ಅವತಾರಗಳನ್ನು ಕಂಡು ತಾವೇ ಹೆದರಿ ಓಡಿ ಹೋದವೆ? ಅಥವಾ ಹಳ್ಳಿ ಹಳ್ಳಿಯನ್ನೂ ನಡುಗಿಸುವ ಡುರ್ರ ಬುರ್ರ ವಾಹನಗಳ ಆವಾಜಿಗೆ ಗಪ್ ಚುಪ್ ಆದವೆ? ಎನ್ನುವದೊಂದು ಮಿಲಿಯನ್ನ ಡಾಲರ ಪ್ರಶ್ನೆ.**

ಇನ್ನು ಆಗಿನ ದೆವ್ವಗಳಾದರೂ ಒಂದೆ ಎರಡೆ? ಸಂಪಿಗೆ ಮರದ ರಣಗೊಲೆ, ಶೀಂಗೆ ಮಟ್ಟಿ ರಾವು, ಆಲದ ಮರದ ಜಡೆ ಭೂತ, ಕಲ್ಲರೆ ಪಿಶಾಚಿ, ದೊಡ್ಡಬೆಟ್ಟದ ಕೀಳು ಹೀಗೆ ಊರ ಸಮಸ್ತ ಜನ, ದನ, ಮಾತ್ರವಲ್ಲದೆ ಗಿಡಗಂಟಿ, ಮರಬಳ್ಳಿ, ತೋಟ ಗದ್ದೆಗಳನ್ನೂ ಬಿಡದೆ ಕಾಡುವ ನಿಗೂಢ ಶಕ್ತಿಗಳು! ತೆಂಗಿನ ಮಿಳ್ಳೆ ಉದುರುತ್ತಿದ್ದರೆ, ಅಡಿಕೆ ಮರದ ಚಂಡೆ ಸೆಣೆತು ಸಣ್ಣಗಾದರೆ, ಭತ್ತದ ಗದ್ದೆಗೆ ಹುಳು ಬಿದ್ದರೆ, ಮತ್ತೆಲ್ಲ ಹೋಗಲಿ, ಸೌಂತೆ ಬಳ್ಳಿಯಲ್ಲಿ ಮಿಡಿ ಕಚ್ಚದಿದ್ದರೂ ''ಎಂತದೊ ಕಾಣಿಸಿಕೊಂಡಿದೆ'' ಎಂದೇ ಲೆಕ್ಕ.

## ಊರು ಕಾಪಾಡುವ ದೈವ

ಇವೆಲ್ಲ ಕಾಡುವ ದೆವ್ವಗಳಾಗಿದ್ದರೆ ಊರು ಕಾಪಾಡುವ ದೈವಗಳೂ ಇದ್ದವು. ಹಳ್ಳದಂಚಿನ ಚೌಡಮ್ಮ, ದನ್ನಿಬೈಲಿನ ಬೀರ್ರು, ಗದ್ದೆ ತುದಿಯ ಜಟಗ, ತೋಟದ ಬುಡದ ನಾಗರು, ಇವರೆಲ್ಲ ತಮಗೆ ಅಪಚಾರವಾದಾಗ ಮಾತ್ರ ಕಾಟ ಕೊಡುತ್ತ, ಉಳಿದಂತೆ ಸಮಸ್ತರನ್ನೂ ರಕ್ಷಿಸುವವರು. ಅಂದರೆ ದೊಡ್ಡಹಬ್ಬದಲ್ಲಿ, ಹನಿಹಬ್ಬದಲ್ಲಿ ಕಾಯಿ ಒಡೆಸದಿದ್ದರೆ ಬೀರ್ರು-ಜಟಗ, ನಾಗರ ಪಂಚಮಿಯಲ್ಲಿ ಪೂಜೆ ಕೊಡದಿದ್ದರೆ ನಾಗರು, ಶುಕ್ರವಾರ ಮಂಗಳವಾರ ತನಗೆ ದೀಪ ಹಚ್ಚದಿದ್ದರೆ ಚೌಡಮ್ಮ ಇವರೆಲ್ಲ ಸಿಟ್ಟಾಗಿ ನಾ ನಾ ನಮನಿ ಕಾಟ ಕೊಡುವವರು! ಅದರಲ್ಲೂ ಚೌಡಮ್ಮನ ಪ್ರತಾಪವಂತೂ ಭಾರೀ ಜೋರು! ಕೊಟ್ಟಿಗೆಯಲ್ಲಿ ಕಟ್ಟಿಟ್ಟ ಕರು ಇದ್ದಕ್ಕಿದ್ದಂತೆ ಮಾಯವಾಗುವದು, ಮೆತ್ತಿಗೆ ಒಣಗಿಸಿದ್ದ ಮಡಿ ಸೀರೆ ಬೆಳಗಂಬೊ ಹೊತ್ತಿಗೆ ಸುಟ್ಟು ಕರಕಲಾಗುವದು, ಊರೆಲ್ಲ ಉಂಡು ಮಲಗಿದ ಮಧ್ಯ ರಾತ್ರಿಯಲ್ಲಿ ಮನೆ ಮಾಡಿನ ಮೇಲೆ ಟಪ ಟಪ ಕಲ್ಲಿನ ಮಳೆ ಬೀಳುವದು, ಒಮ್ಮೊಮ್ಮೆ ಬೆಳಗಿನ ಜಾವದಲ್ಲಿ ಯಾರೊ ಹೆಂಗಸು ಜೋರಾಗಿ ಅಳುವದು, ಮೂರ್‍ನಾಲ್ಕು ವರ್ಷದ ಮಕ್ಕಳನ್ನು ಬೆಳೆಹುಲ್ಲು ಗೊಣಬಿ ಹಿಂದೆ ಒಪ್ಪತ್ತೆಲ್ಲ ಅಡಗಿಸಿಡುವದು, ಛೆ! ಛೆ! ಒಂದೆರಡೇ ಅಲ್ಲ ಚೌಡಿ ಚ್ಯಾಷ್ಟೆ! ಆ ಚೌಡಮ್ಮಂಗೆ ಕೈ ಮುಗಿದಷ್ಟಕ್ಕೂ ಕಡಿಮೆ. ''ಚೌಡಿಯಲ್ಲ ಗಿವಡಿ! ಇದೆಲ್ಲ ಮನೆ ಒಳಗಿನ ಚೌಡೇರಿದ್ದೇ ಕೆಲಸ. ನಿಂಗಕ್ಕೊಂದು ಬ್ಯಾರೆ ಕಸಬಿದ್ದ ನೋಡಿ.'' ಆಗಿನ ಕಾಲದ ನಾಲ್ಕೆತ್ತೆ ಪಂಡಿತ ನಮ್ಮಪ್ಪನ ಉವಾಚ! ಆದರೆ ಈ ಎಲ್ಲ ಹಗರಣದ ಪರಿಹಾರಕ್ಕೆ ನೋಟಗಾರರಂತೂ ಬರಲೇಬೇಕು.

## ಹರಕು ಚಪ್ಪಲಿ ಕಟ್ಟುವುದು!

ಇನ್ನು ದೃಷ್ಟಿ ಬೀಳುವ ಕತೆಯಂತೂ ಮತ್ತೂ ಮಜಾ! ಗಿಡ ಮರಗಳಿಗೆ ದೃಷ್ಟಿಯಾದರೆ ಹರಕು ಚಪ್ಪಲಿ ಕಟ್ಟುವದು, ದನ ಕರುಗಳಿಗೆ ಸೀತಣ್ಣಯ್ಯ ಮಂತ್ರಿಸಿಕೊಟ್ಟ ದಂಡೆ, ತೂತು ಗರಟೆ ಕಟ್ಟುವದು, ಮನುಷ್ಯರಿಗೆ ಒಲೆ ಮುಂದೆ ಕುಂಡ್ರಿಸಿಕೊಂಡು ಉಪ್ಪು ಮೆಣಸು, ಹಿಡಿಕಡ್ಡಿ ನಿವಾಳಿಸಿ ಒಗೆಯುವದು ಇತ್ಯಾದಿ ಇತ್ಯಾದಿ ಪರಿಹಾರಗಳು. ಆದರೆ ಈ ದೆವ್ವ ಭೂತ ದೃಷ್ಟಿಗಳೆಲ್ಲ ಇಂದಿನ ಮನುಷ್ಯರ ಅವತಾರಗಳನ್ನು ಕಂಡು ತಾವೇ ಹೆದರಿ ಓಡಿ ಹೋದವೆ? ಅಥವಾ ಹಳ್ಳಿ ಹಳ್ಳಿಯನ್ನೂ ನಡುಗಿಸುವ ಡುರ್ರ ಬುರ್ರ ವಾಹನಗಳ ಆವಾಜಿಗೆ ಗಪ್ ಚುಪ್ ಆದವೆ? ಎನ್ನುವದೊಂದು ಮಿಲಿಯನ್ನ ಡಾಲರ ಪ್ರಶ್ನೆ. ಅರೆ! ಅವೆಲ್ಲ ಹೋಗಿದ್ದಾದರೂ ಎಲ್ಲಿಗೆ? ಇಲ್ಲೇ ಇದ್ದಾವಲ್ಲ! ಹಾಗೆ ಇದ್ದಿದ್ದರಿಂದಲೇ ಅವುಗಳ ಕಾಟಕ್ಕೆ ಪರಿಹಾರ ಹೇಳುವ ನೂರೆಂಟು ಮಹಾತ್ಮರು ಪ್ರತಿನಿತ್ಯ ಬೆಳಗಾ ಮುಂಚೆ ಟಿ.ವಿ.ಯಲ್ಲಿ ಪ್ರತ್ಯಕ್ಷರಾಗುವದಲ್ಲವೆ? ಎಂದು ನೀವಂದರೂ ಅವುಗಳ ಅಟಾಟೋಪ ತೀರಾ ತೀರಾ ಕಡಿಮೆಯಾಗಿದೆ ಯೆಂಬುದನ್ನಂತೂ ಸಮಸ್ತರೂ ಒಪ್ಪಿಕೊಳ್ಳಲೇಬೇಕು.

ಛೆ! ದೊಡ್ಡಪ್ಪಣ್ಣನ ಸುದ್ದಿ ಹೇಳುತ್ತ ಮತ್ತೆಲ್ಲಿಗೊ ಬಂದುಬಿಟ್ಟೆ, ಕೊಂಕಣ ಸುತ್ತಿ ಮೈಲಾರಕ್ಕೆ ಅಂದುಕೊಂಡು ಕ್ಷಮಿಸಿಬಿಡಿ...ಅರೆ ಬರೆ ನರೆತ ತಲೆ ಮತ್ತು ಚಿಪುರು ಗಡ್ಡಮೀಸೆ, ಇಡೀ ದಿನ ಕವಳ ತುಂಬಿರುವ ಬಾಯಿ, ಮುಂದಿನೆರಡು ಹಲ್ಲಿಲ್ಲದೆ ಸ್ವಲ್ಪ ತೊದಲು ಮಾತು, ಅರ್ಧತೋಳಿನ ಗೀರು ಗೀರು ಅಂಗಿ, ಅದರ ಮೇಲೊಂದು ಗದುಗಿನ ಪಟಕಿ, ಮೊಣಕಾಲು ವರೆಗಿನ ಕುರುಗೋಡು ಪಂಜಿ, ಜೊತೆಗೆ ಅಂಗೊಸ್ತ್ರ ಪಂಜಿಯ ಎರಡೂ ತುದಿಗೊಂದೊಂದು ಗಂಟು ಕಟ್ಟಿ, ಅದನ್ನು ಹಿಮ್ಮೊಟ್ಟೆ ಮುಮ್ಮೊಟ್ಟೆ ಮಾಡಿ ಹೆಗಲಿಗೆ ಹಾಕಿಕೊಂಡು ಗ್ರಾಸ್ತನೊಬ್ಬ ಮನೆ ಮೆಟ್ಟಿಲೇರಿದರೆ ಅದು ಖಂಡಿತಾ ದೊಡ್ಡಪ್ಪಣ್ಣನೇ ಅನುಮಾನವಿಲ್ಲ. ಜೊತೆಗೆ ''ಯಾರ್‍ರೊ, ಮನೆಲ್ಲಿ?'' ಅನ್ನುವ ಅವನ ಕೂಗೂ ವಿಶಿಷ್ಟವೇ. ಕೇಳಿದ್ದೇ ಅಮ್ಮ ಅತ್ತೆ ಎಲ್ಲಿದ್ದರೂ ಬಿದ್ದಾಕಿ ಓಡಿ ಬರಲೇಬೇಕು. ಬಂದು ದೇವರ ಪ್ರಸಾದ ತಗೊಂಡು ಅಕಾಸ್ಮಾತ್ ಸೋದಿಕೆಯ ಕೆಲಸ ಇಲ್ಲದಿದ್ದರೆ ಒಂದು ಗಿಂಡಿ ಮಜ್ಜಿಗೆಯನ್ನಾದರೂ ಕೊಟ್ಟು ಕಳಿಸಲೇಬೇಕು. ಯಾಕೆಂದರೆ ಬಿಸಿಲಲ್ಲಿ ಎರಡು ಮೈಲಿ ನಡೆದು ಬಂದು ಪ್ರಸಾದ ತಲುಪಿಸಿಲ್ಲವೆ? ಅದಕ್ಕೆ ದುಡ್ಡು ಗಿಡ್ಡು ಕೊಡಲು ಅದು ಇಂದಿನ ಕಲಿಗಾಲವಲ್ಲ ಬಿಡಿ. ಇನ್ನು ದೊಡ್ಡಪ್ಪಣ್ಣನಂತೂ ದೇವಸ್ಥಾನದ ಪಡಿಚಾಕ್ರಿಯವನಾಗಿ, ಭಕ್ತರಿಗೆ ತೀರ್ಥ ಪ್ರಸಾದ ಕೊಡುವದು, ಕಾಯಿ ಒಡೆಯುವದು, ದೇವಸ್ಥಾನದ ಚಂದ್ರಸಾಲೆ ಅಂಗಳವನ್ನೆಲ್ಲ ಗುಡಿಸಿ ಚೊಕ್ಕ ಮಾಡುವದು, ಇತ್ಯಾದಿ ಪಡಿಚಾಕ್ರಿ ಮಾಡುತ್ತ ಅಲ್ಲೇ ಪ್ರಸಾದ ಉಣ್ಣುತ್ತ ಇರುವವನಿಗೆ ದುಡ್ಡಿನ ಬಿಸಾತೂ ಇರಲಿಲ್ಲ. ಆಗಿನ ಬಹುತೇಕ ಹೆಂಗಸರಂತೂ ಹತ್ತುರೂಪಾಯಿ ನೋಟನ್ನೂ ಕೈಲಿ ಹಿಡಿದವರಲ್ಲ. ಅದು ಅಂಥ ಕಾಲ.

## ಚತ್ರಾಷಾಡದ ಮೈಲಿಬೇನೆ

ನಮ್ಮ ದೊಡ್ಡಪ್ಪಣ್ಣನಿಗೆ ಮದುವೆಯಾಗಿ ಒಂದೆರಡು ಮಕ್ಕಳೂ ಆಗಿದ್ದರಂತೆ. ಗಿರಿಮನೆ ಎಂಬಲ್ಲಿ ಅವನಿಗೆ ತೋಟ ಮನೆ ಎಲ್ಲ ಇತ್ತಂತೆ. ಇದ್ದಕ್ಕಿದ್ದಂತೆ ಮೈಲಿ ಬೇನೆ ಇಡೀ ಚತ್ರಾಷಾಢಕ್ಕೆಲ್ಲ ವಕ್ಕರಿಸಿ ಕೆಲವರ ಕಣ್ಣು ಹೋಯಿತಂತೆ, ಕೆಲವರ ಕಾಲು ಹೆಳವಾಯಿತಂತೆ. ಹಲವರು ಸತ್ತೇಹೋದರಂತೆ. ದೊಡ್ಡಪ್ಪಣ್ಣನಂತೆ ಗೆರೆ ಗಟ್ಟಿ ಇದ್ದವರು ಮಾತ್ರ ಶಾಬೀತಾಗಿ ಉಳಿದರಂತೆ. ಇಬ್ಬರು ಮಕ್ಕಳು ದಿನ ಮರುದಿನಕ್ಕೆ ಸತ್ತು, ಮೂರನೇ ದಿನ ಹೆಂಡತಿಯೂ ಅದೇ ಹಾದಿ ಹಿಡಿದಾಗ ಇವನು ತಲೆ ಹನ್ನೆರಡಾಣೆ ಆಗಿ ವರ್ಷಗಟ್ಟ್ಲೆ ಎಲ್ಲೊ ಹೋಗಿಬಿಟ್ಟಿದ್ದನಂತೆ. ನಂತರ ಬಂದವನು ಮನೆ ಜಮೀನಿನ ಸುದ್ದಿಗೂ ಹೋಗದೆ ಊರ ದೇವಸ್ಥಾನದಲ್ಲಿ ಬೀಡು ಬಿಟ್ಟನಂತೆ. ಯಾರಾದ್ರೂ ಮನೆ ಸುದ್ದಿ ನೆನಪು ಮಾಡಿದರೆ ''ಇಲ್ಲಿದೆ ನನ್ನ ಮನೆ ಅಲ್ಲಿರುವದು ಸುಮ್ಮನೆ'' ಎಂದು ಹಾಡು ಹೇಳಿದನಂತೆ. ದಾರಿಯಲ್ಲಿ ಹೋಗುವಾಗ ಕಿಲಾಡಿ ಮಕ್ಕಳು ''ಹುಚ್ಚ ಹುಚ್ಚ'' ಎಂದು ಕೂಗಿದರೆ ''ಅಯ್ಯೊ ಶಿವ್ನೆ, ಲೋಕದಲ್ಲಿ ಎಲ್ಲಾರಿಗೂ ಹುಚ್ಚು, ಯಂಗೊಂದು ಸ್ವಲ್ಪ ಹೆಚ್ಚು ಅಷ್ಟೇಯ. ಅದರಿಂದ ನಿಮ್ಮಪ್ಪನ ಗಂಟೇನು ಹೋತ್ರೊ ಪೋರಗಳ್ರಾ''ಎಂದು ನಕ್ಕನಂತೆ.

ಇಂತಿಪ್ಪ ದೊಡ್ಡಪ್ಪಣ್ಣನ ಜಮೀನು,ಮನೆಯನ್ನು ''ನೆರೆ ಹಾಳಾದ್ರೆ, ಕರ ಕಟ್ಟಲೆ ಇಂಬಾತು'' ಎಂಬ ಗಾದೆಯಂತೆ ದಾಯಾದಿಗಳು ತಮ್ಮ ತಮ್ಮಲ್ಲೇ ಹಂಚಿಕೊಂಡುಬಿಟ್ಟಾಗಲೂ ''ಮಾಡು ಸಿಕ್ಕದಲ್ಲ ಮಾಡಿನ ಗೂಡು ಸಿಕ್ಕಲಿಲ್ಲ'' ಎಂದು ಭಜನೆ ಮಾಡಿದನಂತೆ. ಹಾಗೇ ಯಾರಿಂದ ಯಾವಾಗ ದೆವ್ವ ಓಡಿಸುವ ವಿದ್ಯೆ ಕಲಿತು ಬಂದಿದ್ದನೊ, ಅಂತೂ ದೇವಸ್ತಾನದ ಪಡಿಚಾಕ್ರಿಯೊಂದಿಗೆ ನೋಟಗಾರನೂ ಆಗಿ ನಮ್ಮೂರಲ್ಲಿ ಪ್ರಸಿದ್ಧನಾಗಿದ್ದ. ಇನ್ನು ನಮ್ಮ ಅಜ್ಜನ ಮನೆಯ ಹತ್ತಿರ ಇನ್ನೊಬ್ಬ ನೋಟಗಾರನಿದ್ದ. ಹೆಸರು ಗೋವಿಂದಗೌಡ. ಅವನ ವೇಷವಂತೂ ಇನ್ನೂ ''ಚೆಂದ'' ಕಂದು ಬಣ್ಣದ ಸೊಲ್ಲಾಪುರಿ ಬಟ್ಟೆಯ ಪೈರಣ, ತಲೆಗೊಂದು ಯಾವ ಬಣ್ಣದ್ದೆಂದೇ ಗೊತ್ತಾಗದ ಮುಂಡಾಸು, ಸೊಂಟಕ್ಕೊಂದು ಅಂಗೊಸ್ತ್ರದ ತೊಡಿಗೆ, ಹಾಗೇ ಇವನಿಗೂ ಅರೆ ನರೆತ ಗಡ್ಡ ಮೀಸೆ! ಬಾಯಲ್ಲಿ ಸದಾಕಾಲ ತುಂಬಿಕೊಂಡೇ ಇರುವ ಕವಳ.

ನಾಲ್ಕನೆಯ ಪುಟಕ್ಕೆ